



ಬಟ್ಟೆಗಳಿಗೆ ಬಣ್ಣ ಹಾಕುವುದಕ್ಕೆ ಬಾಂಧನಿ ಪ್ರಿಂಟ್ ಎನ್ನಲಾಗುತ್ತದೆ.

ಬಾಂಧನಿ ಪ್ರಿಂಟ್ ಮೂಲಕ ಬಟ್ಟೆಗಳಿಗೆ ಬಣ್ಣ ಹಾಕುವ ಪದ್ಧತಿ ಇಂದು ನಿನ್ನೆಯದಲ್ಲ. ರಾಜಸ್ಥಾನದ ಜೈಪುರದಲ್ಲಿ ಇದೊಂದು ಸ್ವಯಂ ಉದ್ಯೋಗವಾಗಿದ್ದು ಸಾಕಷ್ಟು ಮಹಿಳೆಯರು, ಪುರುಷರು ಈ ತರಹದ ಬಟ್ಟೆ ತಯಾರಿಕೆಯಲ್ಲಿ ತೊಡಗಿದ್ದಾರೆ. ಈ ತರಹದ ಬಾಂಧನಿ ಬಟ್ಟೆಗಳನ್ನು ಮನೆಯಲ್ಲಿಯೇ ಸಾಕಷ್ಟು ಪ್ರಮಾಣದಲ್ಲಿ ತಯಾರಿಸಿ ಮಾರುಕಟ್ಟೆಗೆ ರವಾನಿಸುತ್ತಿದ್ದು, ಅಲ್ಲಿಂದ ವಿದೇಶಕ್ಕೂ ರಫ್ತು ಮಾಡಲಾಗುತ್ತಿದೆ. ರಾಜಸ್ಥಾನದಲ್ಲಿ ತಯಾರಾಗುವ ಈ ಬಾಂಧನಿ ಬಟ್ಟೆಗಳು ಇಡೀ ವಿಶ್ವದಲ್ಲಿಯೇ ಪ್ರಖ್ಯಾತಿ ಗಳಿಸಿವೆ ಎಂದರೆ ನಂಬಲೇಬೇಕು. ಮೊದಲೆಲ್ಲಾ ಬರೀ ಸಿಂಪಲ್ಲಾಗಿ ತಯಾರಾಗುತ್ತಿದ್ದ ಸೀರೆ, ದುಪಟ್ಟಾಗಳು ಇದೀಗ ಇನ್ನಷ್ಟು ಅಪ್‌ಡೇಟ್ ಆಗಿದ್ದು ಗೆಜ್ಜೆ, ದಾರ, ಕನ್ನಡಿ, ಮುತ್ತಿನಂಥ ವಸ್ತುಗಳಿಂದ ಅಲಂಕೃತಗೊಂಡು ಇನ್ನೂ ಸುಂದರವಾಗಿ ಕಂಗೊಳಿಸುತ್ತಿವೆ. ಇದೀಗ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿರುವ ಈ ತರಹದ ಉಡುಗೆಗಳು ಗ್ರಾಹಕರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುತ್ತಿವೆ.

ಇನ್ನು ಈ ಫ್ಯಾಷನ್ ಕೇವಲ ಸಾಂಪ್ರದಾಯಿಕ ಉಡುಗೆಗಳಾದ ಸೀರೆ, ದುಪಟ್ಟಾ, ಗಾಗ್ರಾ, ಲೆಹಂಗಾಗಳಿಗೆ ಮಾತ್ರ ಸೀಮಿತವಾಗಿರದೇ ಪಾಶ್ಚಾತ್ಯ ಉಡುಗೆಗಳಿಗೂ ಸೈ ಎಂಬಂತೆ ಇದೀಗ ಬಾಂಧನಿಯ ದೊಡ್ಡ ದೊಡ್ಡ ಪ್ರಿಂಟ್ಸ್‌ಗಳು ಟೀ ಶರ್ಟ್‌ಗಳು, ಅಂಗಿ, ಜಾಕೆಟ್, ಪ್ಯಾಂಟ್, ಸ್ಕರ್ಟ್ ಹೀಗೆ ಅನೇಕ ವೆಸ್ಟರ್ನ್ ಉಡುಗೆಗಳ ಮೇಲೆ ತನ್ನ ಪ್ರಭಾವ ಬೀರಿದೆ. ಯಂಗ್ ಜನರೇಶನ್ ಯುವಕ ಯುವತಿಯರನ್ನು ಹೆಚ್ಚು ಆಕರ್ಷಿಸುತ್ತಿರುವ ಈ ಫ್ಯಾಷನ್ ಇದೀಗ ಮಾರುಕಟ್ಟೆಯಲ್ಲಿ ಟ್ರೆಂಡಿಯಾಗಿದೆ ಎಂದರೂ ಸುಳ್ಳಲ್ಲ.

ಇನ್ನು ಹುಡುಗರು ತಾವೇನು ಫ್ಯಾಷನ್‌ನಲ್ಲಿ ಕಮ್ಮಿಯಿಲ್ಲ ಎಂಬಂತೆ ಇದೇ ವಿನ್ಯಾಸವಿರುವ ಟೀ ಶರ್ಟ್ ಹಾಗೂ ಅಂಗಿಗಳನ್ನು ಧರಿಸಿ ಮೆರೆಯುತ್ತಿದ್ದಾರೆ. ಈ ತರಹದ ಬಟ್ಟೆಗಳನ್ನು ಧರಿಸಲು ಯಾವುದೇ ವಯೋಮಾನದ ಮಿತಿಯಿಲ್ಲ. ಈ ಬಟ್ಟೆಗಳು ಕಾಲೇಜು ಕನ್ಯೆಯರ ಹಾಟ್ ಫೇವರಿಟ್ ಎಂತಲೇ ಹೇಳಬಹುದು. ಯುವತಿಯರು ತಾವು ಧರಿಸುವ ಎಲ್ಲಾ ವೈವಿಧ್ಯಮಯ ಬಟ್ಟೆಗಳ ಮೇಲೆ ಬಾಂಧನಿ ಸ್ಟೈಲ್ ಇರಲೇಬೇಕೆಂದು ಬಯಸುತ್ತಿದ್ದರೆ, ಮಧ್ಯವಯಸ್ಸಿನ ಮಹಿಳೆಯರು ಬಾಂಧನಿ ಪ್ರಿಂಟ್ಸ್‌ನ ಸಲ್ವಾರ್‌ಗಳನ್ನು ಇಷ್ಟಪಡುತ್ತಿದ್ದಾರೆ. ಕೆಲವರು ಪ್ಲೈನ್ ಸಲ್ವಾರ್‌ಗಳ ಮೇಲೆ ಕಲರ್‌ಫುಲ್ ಬಾಂಧನಿ ಪ್ರಿಂಟ್ಸ್‌ನ ವೇಲ್ ಧರಿಸಿದರೆ, ಇನ್ನು ಕೆಲವರು ತಾವು ತೊಡುವ ಜೀನ್ಸ್ ಪ್ಯಾಂಟ್ ಮೇಲೆ ಪೂರ್ಣಪ್ರಮಾಣದ ಬಾಂಧನಿ ಪ್ರಿಂಟ್ಸ್ ಇರುವ ಕುರ್ತಾಗಳನ್ನು ಧರಿಸಿ ಮೆರೆಯುತ್ತಿದ್ದಾರೆ. ■

## ವಯಸ್ಸಾದವರಿಗೂ...

ವಯಸ್ಸಾದ ಮಹಿಳೆಯರಿಗೋಸ್ಕರ ಕಾಟನ್, ಸಿಂಥೆಟಿಕ್ ಹಾಗೂ ಸಿಲ್ಕ್‌ನ ಬಾಂಧನಿ ಪ್ರಿಂಟ್ಸ್ ಸೀರೆಗಳು ಮಾರುಕಟ್ಟೆಯಲ್ಲಿ ಸಾಕಷ್ಟು ವೈವಿಧ್ಯಗಳಲ್ಲಿ ಲಭ್ಯವಾಗುತ್ತಿವೆ. ಹಾಗೆಯೇ ಚಿಕ್ಕ ಚಿಕ್ಕ ಹೆಣ್ಣುಮಕ್ಕಳ ಫ್ರಾಕ್ಸ್, ಲಂಗ ಜಾಕೆಟ್‌ಗಳು, ಮಿಡಿಗಳು ಮಾರುಕಟ್ಟೆಗೆ ಲಗ್ಗೆಯಿಟ್ಟಿವೆ. ಹಾಗಾಗಿ ಎಲ್ಲಿ ನೋಡಿದರೂ ಇದೀಗ ಈ ಪ್ರಿಂಟ್ಸ್‌ಗಳದ್ದೇ ಭರಾಟೆ. ಅಲ್ಲದೆ ಇದೀಗ ಮಳೆಗಾಲ. ಇಂಥ ಸಮಯದಲ್ಲಿ ಫ್ಯಾಷನ್ ಪ್ರಿಯರು ತಮ್ಮ ಉಗುರುಗಳ ಮೇಲೆ ಕೂಡ ಇದೇ ವಿನ್ಯಾಸ ಹಾಕಿಸಿಕೊಂಡು ಮಿಂಚುತ್ತಿದ್ದಾರೆ. ಇನ್ನು ಕೆಲವರು ತಮ್ಮ ಮನೆಯನ್ನು ಸುಂದರವಾಗಿ ಅಲಂಕರಿಸಲು ಬಾಂಧನಿ ಪ್ರಿಂಟ್ಸ್‌ನ ಡೋರ್ ಕರ್ಟನ್, ಕುಶನ್ ಕವರ್, ಬೆಡ್‌ಶೀಟ್ಸ್ ಡೋರ್ ಮ್ಯಾಟ್‌ಗಳಲ್ಲಿಯೂ ಈ ಪ್ರಿಂಟ್ಸ್‌ನ ಬಟ್ಟೆಗಳನ್ನೇ ಬಳಸುತ್ತಿದ್ದಾರೆ.